2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 198/2021

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಸಂತೋಷ್ ಐ.ಎಂ | ಪಿಡಬ್ಲೂ-1 |
| ತಂದೆಯ ಹೆಸರು | - | ಲೇಟ್ ಮಂಜುನಾಥ್ ಐ ಬಿ | ಸಿಡಬ್ಲೂ -1 |
| ವಯಸ್ಸು | - | 26 ವರ್ಷ | |
| ಉದ್ಯೋಗ | - | ಖಾಸಗಿ ಉದ್ಯಮ | |
| ವಾಸ ಸ್ಥಳ | - | ಬೆಂಗಳೂರು | |

ದಿನಾಂಕಃ 20.07.2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ ಗೊತ್ತು. ಆತ ನನ್ನ ಅಣ್ಣ. ಮೃತೆ ಸುಧಾ ನನ್ನ ತಾಯಿ. ಚಾಸಾ.2 ಮತ್ತು ಚಾಸಾ.3 ನನ್ನ ಅಕ್ಕಪಕ್ಕದ ಮನೆಯವರು. ಚಾಸಾ.4 ರಿಂದ ಚಾಸಾ.7 ನನ್ನ ಸಂಬಂಧಿಕರು. ಚಾಸಾ.8 ಮತ್ತು ಚಾಸಾ.9 ನಮ್ಮ ಊರಿನವರು. ಚಾಸಾ.14 ನನ್ನ ಸಂಬಂಧಿ, ಚಾಸಾ.15 ಚಾಸಾ.14 ರವರ ಸಂಬಂಧಿ. ಉಳಿದ ಸಾಕ್ಷಿದಾರರು ಗೊತ್ತಿಲ್ಲ.

2. ನನ್ನ ತಂದೆ ಮಂಜುನಾಥ ಈಗ್ಗೆ 10 ವರ್ಷಗಳ ಹಿಂದೆ ಅಪಘಾತದಲ್ಲಿ ಮೃತಪಟ್ಟಿದ್ದಾರೆ. ನನ್ನ ತಂದೆ ತಾಯಿಗೆ ನಾನು ಮತ್ತು ನನ್ನ ಅಣ್ಣನಾದ ಆರೋಪಿ ಇಬ್ಬರು ಮಕ್ಕಳು. ನನ್ನ ತಾಯಿ ಚಿಕ್ಕಮಗಳೂರಿನ ಜೈನ್ ದೇವಸ್ಥಾನದ ಹತ್ತಿರ ಇರುವ ಬಾಬುಲಾಲ್ ರವರ ದಿನಸಿ ಅಂಗಡಿಗೆ ದಿನಸಿಯನ್ನು ಪ್ಯಾಕ್ ಮಾಡುವ ಕೆಲಸಕ್ಕೆ ಹೋಗುತ್ತಿದ್ದರು. ಘಟನೆಯ 7 ವರ್ಷಗಳ

ಹಿಂದಿನಿಂದ ನನ್ನ ತಾಯಿ ಸದರಿ ಅಂಗಡಿಯಲ್ಲಿ ಕೆಲಸ ಮಾಡಿಕೊಂಡಿದ್ದರು. ಆರೋಪಿ 10 ನೇ ತರಗತಿ ಫೇಲ್ ಆಗಿದ್ದು ಆತ ಯಾವುದೇ ಕೆಲಸಕ್ಕೆ ಹೋಗದೇ ಮನೆಯಲ್ಲಿಯೇ ಇರುತ್ತಿದ್ದನು ಮತ್ತು ಪ್ರತೀ ದಿನ ಖರ್ಚಿಗಾಗಿ ಹಣವನ್ನು ಕೊಡುವಂತೆ ನನ್ನ ತಾಯಿಯ ಮೇಲೆ ಗಲಾಟೆ ಮಾಡುತ್ತಿದ್ದನು. ಆರೋಪಿ ನನ್ನ ತಾಯಿಯ ಆ್ಯಂಡ್ರಾಯ್ಡ್ ಮೊಬೈಲ್ ನ್ನು ಬಳಸುತ್ತಿದ್ದನು ಅದರ ಸಂಖ್ಯೆ 9620389487 ಆಗಿರುತ್ತದೆ. ನಾನು ಎಂ ಬಿ ಎ ಪದವೀಧರನಾಗಿದ್ದು, ಬೆಂಗಳೂರಿನ Wells for go ಕಂಪೆನಿಯಲ್ಲಿ ಕೆಲಸ ಮಾಡಿಕೊಂಡಿದ್ದೇನೆ. ಘಟನೆಯ 8 ತಿಂಗಳಿನ ಹಿಂದಿನಿಂದ ನಾನು ಸದರಿ ಕಂಪೆನಿಯಲ್ಲಿ ಕೆಲಸ ಮಾಡಿಕೊಂಡಿದ್ದೇನೆ. ಕೊರೋನಾದಿಂದಾಗಿ ನಾನು ಸದರಿ ಕಂಪೆನಿಯ ಕೆಲಸವನ್ನು ಮನೆಯಿಂದಲೇ ಮಾಡುತ್ತಿದ್ದೆನು.

3. ಚಿಕ್ಕಮಗಳೂರಿನ ಗೌರಿಕಾಲುವೆಯ ವಾಟರ್ ಟ್ಯಾಂಕ್ ಹತ್ತಿರ ನಾವು ಭೌಗ್ಯಕ್ಕೆ ಹಾಕಿಸಿಕೊಂಡಿದ್ದ ಮೊದಲನೇ ಮಹಡಿಯ ಮನೆಯಲ್ಲಿ ನಾನು, ನನ್ನ ತಾಯಿ ಮತ್ತು ಅಣ್ಣ ವಾಸವಾಗಿದ್ದೆವು. ಸದರಿ ಮನೆಯಲ್ಲಿ ಮೂರು ಮಹಡಿಗಳಿದ್ದವು. ನಾವು ವಾಸವಿದ್ದ ಮೊದಲನೇ ಮಹಡಿಯಲ್ಲಿ ಎರಡು ಮನೆಗಳಿದ್ದವು. ಆರೋಪಿ ಯಾವುದೇ ಕೆಲಸಕ್ಕೆ ಹೋಗದೇ ಮನೆಯಲ್ಲಿ ಇದ್ದುಕೊಂಡು ಮೊಬೈಲ್ ನೋಡುವುದು, ಟಿ.ವಿ ನೋಡುವುದನ್ನು ಮಾಡಿಕೊಂಡಿದ್ದನು ಮತ್ತು ಕುಡಿಯುತ್ತಿದನು. ಆರೋಪಿ ಕುಡಿಯಲು ನನ್ನ ತಾಯಿಯ ಬಳಿ ಗಲಾಟೆ ಮಾಡಿ ಹಣವನ್ನು ಪಡೆದುಕೊಳ್ಳುತ್ತಿದ್ದನು.

4. ದಿನಾಂಕ 23.09.2021 ರಂದು ಬೆಳಿಗ್ಗೆ 8.30 ಗಂಟೆಗೆ ನಾನು, ನನ್ನ ತಾಯಿ ಮತ್ತು ಆರೋಪಿ ಒಟ್ಟಿಗೆ ಹಿರೇಮಗಳೂರು ಬಳಿ ಇರುವ ಕೊರೆಗಜ್ಜ ದೇವಸ್ಥಾನಕ್ಕೆ ಹೋಗಿದ್ದೆವು. ನಂತರ ಬೆಳಿಗ್ಗೆ 11.30 ಗಂಟೆಗೆ ನಾವು ಮನೆಗೆ ವಾಪಾಸ್ಸು ಬಂದೆವು. ಆಗ ನನ್ನ ಸ್ನೇಹಿತನಾದ ಚಾಸಾ.14 ಸಂಜಯ್ ನಮ್ಮ ಮನೆಯ ಬಳಿ ಬಂದು ಆತ ಪಿಜಿಯಲ್ಲಿದ್ದ ಚಾಸಾ.15 ಮಮತಾ ಆಂಟಿಗೆ ಹುಷಾರಿಲ್ಲದ ಕಾರಣ ಆಕೆಯನ್ನು ಆಸ್ಪತ್ರೆಗೆ ಸೇರಿಸಬೇಕೆಂದು ನನ್ನನ್ನು ಕರೆದನು. ಆಗ ನಾನು ಮತ್ತು ಚಾಸಾ.14 ರವರೊಂದಿಗೆ ಹೋಗಿ ಚಾಸಾ.15 ರವರನ್ನು ಚಿಕ್ಕಮಗಳೂರಿನ ಹೋಲಿಕ್ರಾಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಆಕೆಯನ್ನು ಸದರಿ ಆಸ್ಪತ್ರೆಯಲ್ಲಿ ದಾಖಲು ಮಾಡಿ ಸಂಜೆ 5.30 ಗಂಟೆಗೆ ನಾನು ಮತ್ತು ಚಾಸಾ.14 ರವರು ನಮ್ಮ ಮನೆಗೆ ವಾಪಾಸ್ಸು ಬಂದೆವು. ನಾನು ಮತ್ತು ಚಾಸಾ.14 ರವರು ಆಸ್ಪತ್ರೆಗೆ ಹೋಗಿದ್ದ ಸಮಯದಲ್ಲಿ ನನ್ನ ಅಣ್ಣ ಮತ್ತು ನನ್ನ ತಾಯಿ ಇಬ್ಬರೇ ಮನೆಯಲ್ಲಿ ಇದ್ದರು. ನಾವು ವಾಪಾಸ್ಸು ಮನೆಗೆ ಬಂದ ಸಮಯದಲ್ಲಿ ಆರೋಪಿ ಮನೆಯ ಬಾಗಿಲನ್ನು ತೆಗೆದನು. ಆದರೆ ಬಾಗಿಲು ಅರ್ಧ ಮಾತ್ರ ತೆಗೆದುಕೊಂಡಿರುತ್ತದೆ . ಆಗ ನಾವು ಒಳಗೆ ನೋಡಲಾಗಿ ನನ್ನ ತಾಯಿ ಬಾಗಿಲಿನ ಹಿಂದೆಯೇ ರಕ್ತದ ಮಡುವಿನಲ್ಲಿ ಬಿದ್ದಿದ್ದರು. ಆಕೆಯ ತಲೆಯ ಹಿಂಭಾಗ, ಮುಖದ ಮೇಲೆ ಮತ್ತು ಬಲಕಿವಿಯ ಬಳಿ ರಕ್ತ ಬರುತ್ತಿತ್ತು, ಆಕೆಯ ಬಲಕಿವಿ ಹರಿದು ಹೋಗಿತ್ತು, ಆಕೆ ಮೃತಪಟ್ಟಿದ್ದರು. ಬಾಗಿಲಿನ ಬಳಿ ಇದ್ದ ಹಸಿರು ಬಣ್ಣದ ಡೋರ್ ಮ್ಯಾಟ್,

ಬಾಗಿಲು, ನೆಲದ ಟೈಲ್ಸ್ ಮತ್ತು ಬಾಗಿಲಿನ ಪಕ್ಕದ ಗೋಡೆಗೆ ರಕ್ತದ ಕಲೆಗಳು ಆಗಿದ್ದವು. ನೆಲದಿಂದ ಅರ್ಧದಿಂದ ಒಂದು ಅಡಿ ಅಂತರದಲ್ಲಿ ಗೋಡೆಗೆ ರಕ್ತದ ಕಲೆಗಳು ಆಗಿದ್ದವು. ನನ್ನ ತಾಯಿಯ ಕಣ್ಣುಗಳು, ಕೆನ್ನೆ, ಬಾಯಿ, ಭುಜ ಮತ್ತು ಕುತ್ತಿಗೆಯಲ್ಲಿ ರಕ್ತದ ಗಾಯಗಳು, ಹಿಸುಕಿದಂತಹ ಮತ್ತು ಗುದ್ದಿದಂತಹ ಗಾಯಗಳು ಆಗಿದ್ದವು. ಆ ಸಮಯದಲ್ಲಿ ನನ್ನ ತಾಯಿ ನೀಲಿ ಬಣ್ಣದ ನೈಟಿಯನ್ನು ಧರಿಸಿದ್ದರು ಅದಕ್ಕೂ ಸಹ ರಕ್ತದ ಕಲೆಗಳು ಆಗಿದ್ದವು. ಆ ಸಮಯದಲ್ಲಿ ಆರೋಪಿ ಅಲ್ಲಿಯೇ ನಿಂತುಕೊಂಡಿದ್ದನು. ಆ ದಿನ ನಾವು ದೇವಸ್ಥಾನಕ್ಕೆ ಹೋಗುವ ಸಮಯದಲ್ಲಿ ಆರೋಪಿ ಧರಿಸಿದ್ದ ನೀಲಿ ಬಣ್ಣದ ಜೀನ್ಸ್ ಪ್ಯಾಂಟ್ ಮತ್ತು ನೀಲಿ ಮತ್ತು ಹಸಿರು ಬಣ್ಣ ಮಿಶ್ರಿತ ಚೆಕ್ಸ್ ಶರ್ಟ್ ಗೆ ರಕ್ತದ ಕಲೆಗಳಾಗಿದ್ದು ಅದನ್ನು ಆತ ಬಿಚ್ಚಿ ಒಂದು ಕವರ್ ನಲ್ಲಿ ಹಾಕಿ ಅಡುಗೆ ಮನೆಯ ಮೂಲೆಯಲ್ಲಿ ಇಟ್ಟು ನಂತರ ನೈಟ್ ಪ್ಯಾಂಟ್ ಮತ್ತು ಶರ್ಟ್ ನ್ನು ಹಾಕಿಕೊಂಡಿದ್ದನು.

5. ನಾನು ಆರೋಪಿಯನ್ನು ವಿಚಾರಿಸಿದಾಗ ಆತ ನಮ್ಮ ತಾಯಿಯ ಬಳಿ ಖರ್ಚಿಗೆ ಹಣವನ್ನು ಕೇಳಿದಾಗ ನನ್ನ ತಾಯಿ ಹಣವನ್ನು ಕೊಡದ ಕಾರಣ ಆಕೆಯ ತಲೆಯನ್ನು ಗೋಡೆಗೆ ಗುದ್ದಿದಾಗ ಆಕೆಯ ಕಿವಿಯಲ್ಲಿ ರಕ್ತ ಬಂದು ಕೆಳಗೆ ಬಿದ್ದಿದ್ದಾಗಿ ನಂತರ ಆಕೆಯ ಕುತ್ತಿಗೆಯನ್ನು ಹಿಸುಕಿ, ಕೈಯಿಂದ ಮುಖಕ್ಕೆ ಗುದ್ದಿ, ಕಾಲಿನಿಂದ ಮುಖಕ್ಕೆ ಒದ್ದು ಆಕೆಯನ್ನು ಸಾಯಿಸಿದ್ದಾಗಿ ತಿಳಿಸಿದನು. ನಂತರ ನಾನು ಜೋರಾಗಿ ಅಳುತ್ತಾ ಕಿರುಚಿಕೊಂಡು ಆಚೆ ಬಂದೆನು. ಆಗ ನಮ್ಮ ಮನೆಯ ಪಕ್ಕದಲ್ಲಿ

ವಾಸವಿದ್ದ ಚಾಸಾ.3 ರುಬೆನ್ ಮೋಸೆಸ್ ರವರು ಅಲ್ಲಿಗೆ ಬಂದು ನೋಡಿ ಬಸವನಹಳ್ಳಿ ಪೊಲೀಸ್ ಠಾಣೆಗೆ ಕರೆ ಮಾಡಿದರು. ನಂತರ ಅಲ್ಲಿಗೆ ಬಸವನಹಳ್ಳಿ ಪೊಲೀಸ್ ಠಾಣೆಯ ಪಿ ಎಸ್ ಐ ಮತ್ತು ಸಿಬ್ಬಂದಿರವರು ಬಂದು ಠಾಣೆಗೆ ಹೋಗಿ ದೂರು ನೀಡುವಂತೆ ತಿಳಿಸಿದರು. ನಂತರ ನಾನು ಅದೇ ದಿನ ಬಸವನಹಳ್ಳಿ ಪೊಲೀಸ್ ಠಾಣೆಗೆ ಸಂಜೆ 6.30 ಗಂಟೆಗೆ ಹೋಗಿ ನನ್ನ ತಾಯಿಯನ್ನು ಕೊಲೆ ಮಾಡಿದ್ದ ಆರೋಪಿಯ ವಿರುದ್ಧ ಕ್ರಮ ಜರುಗಿಸುವಂತೆ ದೂರು ನೀಡಿರುತ್ತೇನೆ.

6. ಸದರಿ ದೂರನ್ನು ನೋಡಿ ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ದೂರನ್ನು ನಿಪಿ.1 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಸದರಿ ದೂರನ್ನು ಪೊಲೀಸರು ದಾಖಲು ಮಾಡಿಕೊಂಡು ನನಗೆ ಪ್ರಥಮ ವರ್ತಮಾನ ವರದಿಯ ಪ್ರತಿಯನ್ನು ನೀಡಿ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸದರಿ ಪ್ರಥಮ ವರ್ತಮಾನ ವರದಿಯನ್ನು ನೋಡಿ ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ಪ್ರಥಮ ವರ್ತಮಾನ ವರದಿಯನ್ನು ನಿಪಿ.2 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು.

7. ದೂರು ದಾಖಲಿಸಿದ ಬಳಿಕ ಪೊಲೀಸರು ಸಂಜೆ 7.00 ರಿಂದ 7.30 ಗಂಟೆಯ ಸಮಯಕ್ಕೆ ನಮ್ಮ ಮನೆಗೆ ಸ್ಥಳ ಪಂಚನಾಮೆ

ಜರುಗಿಸುವ ಸಲುವಾಗಿ ಬಂದಿದ್ದರು. ಆರೋಪಿ ಬಾಗಿಲನ್ನು ತೆಗೆದಾಗ ಅದು ಪೂರ್ತಿ ತೆರೆದುಕೊಳ್ಳಲಿಲ್ಲ ಕಾರಣ ನನ್ನ ತಾಯಿಯ ಮೃತ ದೇಹ ಬಾಗಿಲ ಹಿಂದಿಯೇ ಬಿದ್ದಿತ್ತು. ಸಾಕ್ಷಿಯು ನಾಲ್ಕು ಫೋಟೋಗಳನ್ನು ನೋಡಿ ಗುರುತಿಸಿ ಸದರಿ ಫೋಟೋಗಳಲ್ಲಿ ನಮ್ಮ ಮನೆಯ ಬಾಗಿಲು, ಅದರ ಹಿಂದೆಯೇ ರಕ್ತದ ಮಡುವಿನಲ್ಲಿ ಬಿದ್ದಿದ್ದ ನನ್ನ ತಾಯಿಯ ಮೃತ ದೇಹ, ಬಾಗಿಲ ಬಳಿ ಇದ್ದ ರಕ್ತದ ಕಲೆಗಳಾಗಿದ್ದ ಹಸಿರು ಬಣ್ಣದ ಡೋರ್ ಮ್ಯಾಟ್, ನೆಲದ ಟೈಲ್ಸ್ ಮೇಲೆ ಮತ್ತು ಗೋಡೆಗೆ ರಕ್ತದ ಕಲೆಗಳು ಆಗಿರುವುದು ಕಂಡು ಬರುತ್ತದೆ ಎಂದು ನುಡಿದಿರುತ್ತಾರೆ. ಸದರಿ ಫೋಟೋಗಳನ್ನು ನಿಪಿ.3 ರಿಂದ ನಿಪಿ.6 ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ನನ್ನ ತಾಯಿ ಧರಿಸಿದ್ದ ನೈಟಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನೀಲಿ ಬಣ್ಣದ ರಕ್ತದ ಕಲೆಗಳಿರುವ ಗೌನ್ (ನೈಟಿ) ಇದೆ ಎಂದು ಹೇಳಲಾದ ಬಿಳಿಯ ಬಟ್ಟೆಯಲ್ಲಿ ಹೊಲೆದು, ಎಫ್ ಎಸ್ ಎಲ್ ಸೀಲು ಮಾಡಲಾಗಿದ್ದ ಪ್ಯಾಕ್ ನ್ನು ಆರೋಪಿಪರ ವಕೀಲರು ಮತ್ತು ಸರ್ಕಾರಿ ಅಭಿಯೋಜಕರ ಸಮಕ್ಷಮ ತೆರೆದು ತೋರಿಸಲಾಗಿ ಅದರಲ್ಲಿರುವ ನೀಲಿ ಬಣ್ಣದ ರಕ್ತದ ಕಲೆಗಳಾಗಿರುವ ನೈಟಿಯನ್ನು ಸಾಕ್ಷಿಯು ನೋಡಿ ಗುರುತಿಸಿ ನನ್ನ ತಾಯಿ ಮೃತಪಟ್ಟ ಸಮಯದಲ್ಲಿ ಆಕೆ ಧರಿಸಿದ್ದ ನೈಟಿ ಅದೇ ಎಂದು ನುಡಿದು ಅದಕ್ಕೆ ರಕ್ತದ ಕಲೆಗಳು ಆಗಿದ್ದವು ಎಂದು ನುಡಿದಿರುತ್ತಾರೆ. ಸದರಿ ನೈಟಿಯನ್ನು ಮು.ಮಾ.1 ಎಂದು ಗುರುತಿಸಲಾಯಿತು.

8. ದಿನಾಂಕ 24.09.2021 ರಂದು ಚಿಕ್ಕಮಗಳೂರಿನ ಮಲ್ಲೇಗೌಡ ಸರ್ಕಾರಿ ಆಸ್ಪತ್ರೆಯಲ್ಲಿ ಪೊಲೀಸರು ನನ್ನ ತಾಯಿಯ ಶವತನಿಖೆಯನ್ನು ನಡೆಸಿದರು. ಆ ಸಮಯದಲ್ಲಿ ನಾನು ಹಾಜರಿದ್ದೆನು. ಸಾಕ್ಷಿಯ ಒಂದು ಫೋಟೋವನ್ನು ನೋಡಿ ಗುರುತಿಸಿ ಅದನ್ನು ಮೇಲೆ ತಿಳಿಸಿದ ಆಸ್ಪತ್ರೆಯಲ್ಲಿ ಶವತನಿಖಾ ಕಾಲದಲ್ಲಿ ಪೊಲೀಸರು ತೆಗೆದಿದ್ದಾಗಿ ನುಡಿದು ಅದರಲ್ಲಿ ನನ್ನ ತಾಯಿಯ ಮೃತ ದೇಹ ಇದೆ ಎಂದು ನುಡಿದಿರುತ್ತಾರೆ. ಸದರಿ ಫೋಟೋವನ್ನು ನಿಪಿ.7 ಎಂದು ಗುರುತಿಸಲಾಯಿತು.

9. ಸಾಕ್ಷಿಯು ಮತ್ತೊಂದು ಫೋಟೋವನ್ನು ನೋಡಿ ಗುರುತಿಸಿ ಸದರಿ ಫೋಟೋದಲ್ಲಿ ಆರೋಪಿ ನನ್ನ ತಾಯಿಯ ಮೇಲೆ ಹಲ್ಲೆ ಮಾಡಿದ ಸಮಯದಲ್ಲಿ ಆಕೆಯ ಕಿವಿ ಹರಿದಿರುವುದು ಕಂಡು ಬರುತ್ತದೆ ಎನ್ನುತ್ತಾರೆ. ಸದರಿ ಫೋಟೋವನ್ನು ನಿಪಿ.8 ಎಂದು ಗುರುತಿಸಲಾಯಿತು. ಸಾಕ್ಷಿಯು ಎರಡು ಫೋಟೋಗಳನ್ನು ನೋಡಿ ಗುರುತಿಸಿ ಅವುಗಳಲ್ಲಿ ನನ್ನ ತಾಯಿಯ ಕಣ್ಣುಗಳು, ಕೆನ್ನೆ ಬಾಯಿ ಮತ್ತು ತಲೆಯ ಹಿಂಭಾಗದಲ್ಲಿ ಗಾಯಗಳಾಗಿರುವುದು ಕಂಡುಬರುತ್ತದೆ ಎಂದು ನುಡಿದಿರುತ್ತಾರೆ. ಸದರಿ ಫೋಟೋಗಳನ್ನು ನಿಪಿ.9 ಮತ್ತು ನಿಪಿ.10 ಎಂದು ಗುರುತಿಸಲಾಯಿತು.

10. ಪೊಲೀಸರು ಮೇಲೆ ತಿಳಿಸಿದ ಆಸ್ಪತ್ರೆಯಲ್ಲಿ ನನ್ನ ತಾಯಿಯ ಶವಪರೀಕ್ಷೆಯನ್ನು ನಡೆಸುವ ಸಮಯದಲ್ಲಿ ನನ್ನನ್ನು

ವಿಚಾರಿಸಿದ್ದಾರೆ. ಆಗ ನಾನು ಅವರಿಗೆ ಮೇಲೆ ತಿಳಿಸಿದ ವಿಷಯಗಳನ್ನು ತಿಳಿಸಿ ಹೇಳಿಕೆ ನೀಡಿದ್ದೇನೆ.

11. ಸಾಕ್ಷಿಯು ಆರೋಪಿ ಘಟನೆಯ ದಿನ ನನ್ನ ಮತ್ತು ನನ್ನ ತಾಯಿಯೊಂದಿಗೆ ದೇವಸ್ಥಾನಕ್ಕೆ ಬರುವ ಸಮಯದಲ್ಲಿ ನೀಲಿ ಬಣ್ಣದ ಜೀನ್ಸ್ ಪ್ಯಾಂಟ್ ಮತ್ತು ನೀಲಿ ಮತ್ತು ಹಸಿರು ಬಣ್ಣ ಮಿಶ್ರಿತ ಚೆಕ್ಸ್ ಶರ್ಟನ್ನು ಧರಿಸಿದ್ದನು. ನಂತರ ನಾನು ಮನೆಗೆ ವಾಪಾಸ್ಸು ಬಂದ ಸಮಯದಲ್ಲಿ ಆತ ಸದರಿ ಬಟ್ಟೆಗಳನ್ನು ಬಿಚ್ಚಿ ಒಂದು ಕವರ್ ನಲ್ಲಿ ಹಾಕಿ ಅಡುಗೆ ಮನೆಯ ಮೂಲೆಯಲ್ಲಿ ಇಟ್ಟಿದ್ದನು. ಅವುಗಳಿಗೆ ರಕ್ತದ ಕಲೆಗಳು ಆಗಿದ್ದವು. ಸದರಿ ಬಟ್ಟೆಗಳು ಇವೆ ಎಂದು ಹೇಳಲಾದ ಬಿಳಿಯ ಬಟ್ಟೆಯಲ್ಲಿ ಹೊಲೆದು ಎಫ್ ಎಸ್ ಎಲ್ ಸೀಲು ಮಾಡಲಾಗಿದ್ದ ಪ್ಯಾಕ್ ಗಳನ್ನು ಆರೋಪಿಪರ ವಕೀಲರು ಮತ್ತು ಸರ್ಕಾರಿ ಅಭಿಯೋಜಕರ ಸಮಕ್ಷಮ ತೆರೆದು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ರಕ್ತದ ಕಲೆಗಳಾಗಿರುವ ನೀಲಿ ಬಣ್ಣದ ಜೀನ್ಸ್ ಪ್ಯಾಂಟ್ ಮತ್ತು ನೀಲಿ ಮತ್ತು ಹಸಿರು ಬಣ್ಣ ಮಿಶ್ರಿತ ಚೆಕ್ಸ್ ಶರ್ಟನ್ನು ನೋಡಿ ಗುರುತಿಸಿ ಅವುಗಳನ್ನು ಘಟನೆಯ ದಿನ ಆರೋಪಿ ಧರಿಸಿದ್ದಾಗಿ ನಂತರ ಅವುಗಳನ್ನು ಬಿಚ್ಚಿ ಅಡುಗೆ ಮನೆಯ ಮೂಲೆಯಲ್ಲಿ ಒಂದು ಕವರ್ ನಲ್ಲಿ ಇಟ್ಟಿದ್ದಾಗಿ ಅವುಗಳಿಗೆ ರಕ್ತದ ಕಲೆಗಳು ಆಗಿರುವುದಾಗಿ ನುಡಿದಿರುತ್ತಾರೆ. ಸದರಿ ನೀಲಿ ಬಣ್ಣದ ಜೀನ್ಸ್ ಪ್ಯಾಂಟ್ ಮತ್ತು ನೀಲಿ ಮತ್ತು ಹಸಿರು ಬಣ್ಣ ಮಿಶ್ರಿತ ಚೆಕ್ಸ್ ಶರ್ಟನ್ನು ಮು.ಮಾ.2 ಮತ್ತು ಮು.ಮಾ.3 ಎಂದು ಗುರುತಿಸಲಾಯಿತು.

12. ದಿನಾಂಕ 25.09.2021 ರಂದು ಪೊಲೀಸರು ನನ್ನನ್ನು ಪುನಃ ವಿಚಾರಣೆಗಾಗಿ ಕರೆಸಿದ್ದರು. ಆಗ ನಾನು ಚಾಸಾ.14 ಸಂಜಯ್ ರವರೊಂದಿಗೆ ಚಾಸಾ.15 ಮಮತಾರವರನ್ನು ಆಸ್ಪತ್ರೆಯಲ್ಲಿ ನೋಡಲು ಹೋಗಿದ್ದಾಗಿ ಈ ಹಿಂದೆ ನಿಪಿ.1 ದೂರಿನಲ್ಲಿ ತಿಳಿಸಿದ್ದು ಆದರೆ ನಾನು ಆ ದಿನ ಚಾಸಾ.14 ರವರೊಂದಿಗೆ ಅರವಿಂದನಗರದಲ್ಲಿರುವ ಚಾಸಾ.15 ರವರ ಮನೆಗೆ ಹೋಗಿ ಅಲ್ಲಿಂದ ಆಕೆಯನ್ನು ನಾನು ಮತ್ತು ಚಾಸಾ.14 ರವರು ಹೋಲಿಕ್ರಾಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿದ್ದಾಗಿ ಮರು ಹೇಳಿಕೆ ನೀಡಿರುತ್ತೇನೆ. ನಿಪಿ.1 ದೂರಿನಲ್ಲಿ ಚಾಸಾ.15 ಮಮತಾರವರು ಚಾಸಾ.14 ರವರ ಪಿಜಿಯ ಮಾಲೀಕರೆಂದು ಗಾಬರಿಯಲ್ಲಿ ತಿಳಿಸಿರುತ್ತೇನೆ. ಆದರೆ ಪೊಲೀಸರಿಗೆ ನೀಡಿದ ಮರು ಹೇಳಿಕೆಯಲ್ಲಿ ಚಾಸಾ.15 ಮಮತಾ ಚಾಸಾ.14 ರವರ ಸಂಬಂಧಿಕರಾಗಿದ್ದು ಚಾಸಾ.14 ಚಾಸಾ.15 ರವರ ಮನೆಯಲ್ಲಿ ಉಳಿದುಕೊಂಡು, ಆತ ತಿಂಗಳಿನ ಖರ್ಚನ್ನು ಚಾಸಾ.15 ರವರಿಗೆ ನೀಡುತ್ತಿದ್ದರು ಎಂದು ತಿಳಿಸಿದ್ದೇನೆ.

13. ದೂರು ದಾಖಲು ಮಾಡಿದ ಬಳಿಕ ಪೊಲೀಸರು ಸ್ಥಳ ಪಂಚನಾಮೆಗೆ ಹಾಜರಿರುವಂತೆ ನನಗೆ ತಿಳಿಸಿದ್ದರು ಆದರೆ ನನಗೆ ಘಟನೆಯಿಂದಾಗಿ ಆಘಾತವಾಗಿ ಸುಸ್ತಾಗಿದ್ದರಿಂದ ನನ್ನ ತಾಯಿಯ ಮೃತ ದೇಹವನ್ನು ಆ ಸ್ಥಿತಿಯಲ್ಲಿ ನೋಡಲು ಆಗುವುದಿಲ್ಲವೆಂದು ಹೇಳಿದೆನು. ನಂತರ ಬಸವನಹಳ್ಳಿಯ

ಪೊಲೀಸ್ ಠಾಣೆಯ ಪಿ ಎಸ್ ಐ ರವರು ಆ ಸ್ಥಳವನ್ನು ಆಗಾಗಲೇ ನೋಡಿದ್ದರಿಂದ ಅವರು ರುಬೇನ್ ಮೋಸೆಸ್ ಮತ್ತು ರಾಜೇಶ್ ಗೌಡರವರನ್ನು ಕರೆಸಿಕೊಂಡು ಪಂಚನಾಮೆ ಜರುಗಿಸಿದ್ದಾಗಿ ತಿಳಿಯಿತು. ಆ ಸಮಯದಲ್ಲಿ ಆರೋಪಿ ಘಟನಾ ಸಮಯದಲ್ಲಿ ತಾನು ಧರಿಸಿದ್ದ ಪ್ಯಾಂಟ್ ಮತ್ತು ಶರ್ಟ್ ಗೆ ನನ್ನ ತಾಯಿಯ ರಕ್ತ ಅಂಟಿಕೊಂಡಿದ್ದರಿಂದ ಅದನ್ನು ಬದಲಾಯಿಸಿ ಮನೆಯ ಅಡುಗೆ ಮನೆಯ ಮೂಲೆಯಲ್ಲಿ ಇಟ್ಟಿದ್ದನ್ನು ಪೊಲೀಸರಿಗೆ ಹಾಜರುಪಡಿಸಿದ್ದು ಅದನ್ನು ಪೊಲೀಸರು ವಶಪಡಿಸಿಕೊಂಡಿದ್ದಾಗಿ ತಿಳಿಯಿತು.

**(ಪಾಟೀ ಸವಾಲು: ಆರೋಪಿ ಪರ ವಕೀಲರು ಸಾಕ್ಷಿಯ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.)**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ.